ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 592 (677) |
| 2. | ಮಾನ್ಯ ಪರಿಷತ್ ಸದಸ್ಯರ ಹೆಸರು | ಶ್ರೀ ಐವನ್ ಡಿ' ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | 18.08.2025 |
| 4. | ಉತ್ತರಿಸುವವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಪ್ರಸಕ್ತ ಸಾಲಿನಲ್ಲಿ ಅಂತರಾಷ್ಟ್ರೀಯ ವಲಸಿಗರ ಕೇಂದ್ರ ಕರ್ನಾಟಕ (International migration centre Karnataka IMCK) ಮೂಲಕ ಹೊರದೇಶದ ಉದ್ಯೋಗಾವಕಾಶಗಳನ್ನು ಒದಗಿಸಿಕೊಡುವ ಕಾರ್ಯ ಯೋಜನೆ ಸರ್ಕಾರದ ಮುಂದಿದೆಯೇ: (ಮಾಹಿತಿ ನೀಡುವುದು) | ಹೌದು,<br>ರಾಜ್ಯದ ಯುವ ಜನತೆಗೆ ಹೊರ ದೇಶದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ವಿದೇಶದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಉದ್ಯೋಗ ಮೇಳವನ್ನು ಆಯೋಜಿಸಲಾಗುವುದು.<br>• ಅಂತರಾಷ್ಟ್ರೀಯ ನೇಮಕಾತಿಯನ್ನು ಉತ್ತೇಜಿಸಲು ವಿದೇಶಿ ಉದ್ಯೋಗದಾತರೊಂದಿಗೆ ರೋಡ್-ಶೋ ನಡೆಸಲು ಉದ್ದೇಶಿಸಲಾಗಿದೆ.<br>• ಶುಶ್ರೂಷಕರಿಗೆ ವಿದೇಶದಲ್ಲಿ ಉದ್ಯೋಗಾವಕಾಶ ಪಡೆಯಲು ಅವಶ್ಯವಿರುವ ಕಡ್ಡಾಯ ಪ್ರವೇಶ ಪರೀಕ್ಷೆಗಳ ಕುರಿತು ಮಾರ್ಗದರ್ಶನ ನೀಡಿ ಉದ್ಯೋಗದಾತರ ಪ್ರಾಥಮಿಕ ಸಂದರ್ಶನವನ್ನು ಆಯೋಜಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಜರ್ಮನ್, ಇಂಗ್ಲೀಷ್ ಮುಂತಾದ ವಿದೇಶಿ ಭಾಷೆಗಳ ತರಬೇತಿ ನೀಡಲಾಗುವುದು |
| (ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ IMC-K ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ; ಜಿಲ್ಲಾ ಕೇಂದ್ರಗಳಲ್ಲಿ ಪ್ರಸ್ತುತ ಒದಗಿಸಲಾಗಿರುವ ಸೌಲಭ್ಯ ಹಾಗೂ ಸಿಬ್ಬಂದಿಗಳ ವಿವರ ನೀಡುವುದು. | • ಪ್ರಸ್ತುತ IMC-K ಕೇಂದ್ರವು ರಾಜ್ಯದ ಕೇಂದ್ರ ಕಛೇರಿ, ಬೆಂಗಳೂರಿನಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದೆ.<br>• ಜಿಲ್ಲಾ ಕೇಂದ್ರಗಳಲ್ಲಿ ಯಾವುದೇ IMC-K ಕೇಂದ್ರಗಳು ಇರುವುದಿಲ್ಲ. |
| (ಇ) ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಪ್ರಸ್ತುತ ಸಾಲಿನಲ್ಲಿ ಹಮ್ಮಿಕೊಳ್ಳಲಾಗುವ ಯೋಜನೆಗಳಾವುವು? (ಯೋಜನೆವಾರು / ಜಿಲ್ಲಾವಾರು ಅನುದಾನದ ವಿವರ | ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಂಡಿರುವ ಯೋಜನೆಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಿದೆ. |

ಸಂಖ್ಯೆ: ಕೌಉಜೀಇ 21 ಕೌಗುಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

## ಅನುಬಂಧ

## ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು

### 2025-26ನೇ ಸಾಲಿನಲ್ಲಿ ಆಯೋಜಿಸಲಾಗುವ ನಿಗಮದ ಕಾರ್ಯಕ್ರಮಗಳ ವಿವರ

| ಕ್ರ ಸಂ. | ಯೋಜನೆ/ ಕಾರ್ಯಕ್ರಮಗಳ ಹೆಸರು | ನಿಗದಿಪಡಿಸಿರುವ ಗುರಿ (ಕ್ರಿಯಾ ಯೋಜನೆಯನ್ವಯ) | | | | | | | |
|---|---|---|---|---|---|---|---|---|---|
| | | ಆರ್ಥಿಕ | | | | ಭೌತಿಕ | | | |
| | | 059 | 422 | 423 | ಒಟ್ಟು | 059 | 422 | 423 | ಒಟ್ಟು |
| 1 | ಯುವನಿಧಿ ಪ್ಲಸ್ : ಸರ್ಕಾರಿ ತರಬೇತಿ ಸಂಸ್ಥೆಗಳು | | | | | | | | |
| | ಐಟಿಐ | 60.00 | 10.00 | 25.00 | 95.00 | 1200 | 200 | 500 | 1900 |
| | ಜಿಟಿಟಿಸಿ | 60.00 | 10.00 | 25.00 | 95.00 | 1200 | 200 | 500 | 1900 |
| | ಕೆಜಿಟಿಟಿಐ | 50.00 | 6.00 | 15.00 | 71.00 | 1000 | 120 | 300 | 1420 |
| | ಮೋಕ್ಷಗುಡಂ | 30.00 | 3.00 | 7.50 | 40.50 | 600 | 60 | 150 | 810 |
| | ಇತರೆ ಸರ್ಕಾರಿ ತರಬೇತಿ ಕೇಂದ್ರ | 100.00 | 11.00 | 57.50 | 168.50 | 2000 | 220 | 1150 | 3370 |
| | ಒಟ್ಟು | 300.00 | 40.00 | 130.00 | 470.00 | 6000 | 800 | 2600 | 9400 |
| 2 | ಯುವನಿಧಿ ಪ್ಲಸ್ : ಖಾಸಗಿ ತರಬೇತಿ ಸಂಸ್ಥೆಗಳು | 200.00 | 38.50 | 50.00 | 288.50 | 1000 | 192 | 250 | 1442 |
| 3 | ಯುವನಿಧಿ ಪ್ಲಸ್ : ಐ.ಎಲ್.ಸಿ. ಮತ್ತು ಫ್ಯೂಚರ್ ಸ್ಕಿಲ್ಸ್ | 400.00 | 70.00 | 119.00 | 589.00 | 2000 | 350 | 595 | 2945 |
| | **ಒಟ್ಟು (ಯುವನಿಧಿ)** | **900.00** | **148.50** | **299.00** | **1347.50** | **9000** | **1342** | **3445** | **13787** |
| 4 | ಕಾರಾಗೃಹದಲ್ಲಿ ತರಬೇತಿ | 38.00 | 0.00 | 0.00 | 38.00 | 200 | 0 | 0 | 200 |
| 5 | ಅಳಿವಿನ ಅಂಚಿನಲ್ಲಿರುವ ಪಾರಂಪರಿಕ ಮತ್ತು ಪ್ರಾದೇಶಿಕ ಕೌಶಲ್ಯ ತರಬೇತಿಯೊಂದಿಗೆ ಟೂಲ್‌ಕಿಟ್ ವಿತರಣೆ | 254.66 | 63.67 | 56.18 | 374.51 | 1360 | 340 | 300 | 2000 |
| 6 | ಲಂಬಾಣಿ ಜನಾಂಗದ ಕಸೂತಿ ಕಲೆಯ ಕುರಿತು ಬೀದರ್ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಕೌಶಲ್ಯ ತರಬೇತಿ | 180.00 | 120.00 | 0.00 | 300.00 | 600 | 400 | 0 | 1000 |
| 7 | ಕಲಿಕೆ ಜೊತೆಗೆ ಕೌಶಲ್ಯ – ಅಂತಿಮ ವರ್ಷದ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗೆ ತರಬೇತಿ | 776.60 | 111.50 | 100.00 | 988.10 | 38830 | 5575 | 5000 | 49405 |
| 8 | ಗುರುತಿಸಲಾದ ಮ್ಯಾನುಯೆಲ್ ಸ್ಕ್ಯಾವೆಂಜರ್/ಅವರ ಕುಟುಂಬದ ಸದಸ್ಯರಿಗೆ ಅಲ್ಪಾವಧಿ ತರಬೇತಿ | 0.00 | 0.00 | 66.33 | 66.33 | 0 | 663 | 0 | 663 |
| 9 | ರಾಜ್ಯದ ನರ್ಸಿಂಗ್ ವಿದ್ಯಾರ್ಥಿಗಳಿಗೆ ವಿದೇಶಿ ಭಾಷಾ ಕೌಶಲ್ಯ ತರಬೇತಿ (ಜರ್ಮನ್, ಇಟಾಲಿಯನ್, ಸ್ಪ್ಯಾನಿಷ್) | 200.00 | 25.50 | 10.50 | 236.00 | 0 | 0 | 0 | 420 |
| | **ಅ. ಒಟ್ಟು (ತರಬೇತಿ)** | **2349.26** | **469.17** | **532.01** | **3350.44** | **49990** | **8320** | **8745** | **67475** |
| 10 | ರಾಜ್ಯ ಕೌಶಲ್ಯ ಒಲಂಪಿಕ್ಸ್ | | | | | | | | **165.00** |
| 11 | ನನ್ನ ವೃತ್ತಿ ನನ್ನ ಆಯ್ಕೆ : ಎಸ್.ಎಸ್.ಕೆ. ಮತ್ತು ಪಿಯು ಕಾಲೇಜುಗಳ ಸಹಯೋಗದೊಂದಿಗೆ 500 ಶಾಲಾ / ಕಾಲೇಜುಗಳಲ್ಲಿ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ. | | | | | | | | **480.10** |
| 12 | ರಾಜ್ಯದಲ್ಲಿ ಉದ್ಯಮಗಳ ಬೇಡಿಕೆಗೆ ಪೂರಕವಾದ ಉತ್ತಮ ಗುಣಮಟ್ಟದ ಕೌಶಲ್ಯ ಪರಿಸರ ವ್ಯವಸ್ಥೆಯನ್ನು ರಚಿಸುವತ್ತ ಗಮನಹರಿಸಲು ರಾಜ್ಯ ಮಟ್ಟದ ಕೌಶಲ್ಯ ಶೃಂಗ ಸಭೆ (ಸ್ಕಿಲ್ ಸಮ್ಮಿಟ್) | | | | | | | | **271.00** |
| 13 | ಅಂತರಾಷ್ಟ್ರೀಯ ಉದ್ಯೋಗ ಮೇಳ (ಐ.ಎಂ.ಸಿ.ಕೆ) | | | | | | | | **354.24** |
| 14 | ಉದ್ಯೋಗ ಮೇಳ (ಕೆ.ಎಸ್.ಡಿ.ಸಿ) | | | | | | | | **1150.00** |
| 15 | ಅಂತರಾಷ್ಟ್ರೀಯ ನೇಮಕಾತಿಯನ್ನು ಉತ್ತೇಜಿಸುವ ಸಂಬಂಧ ವಿದೇಶಿ ಉದ್ಯೋಗದಾತರೊಂದಿಗೆ ಸಮಾವೇಶ (ರೋಡ್ ಶೋ) | | | | | | | | **150.00** |
| 16 | ರಾಜ್ಯದ ವಿದ್ಯಾರ್ಥಿಗಳಿಗೆ ವಿದೇಶಿ ಭಾಷಾ ತರಬೇತಿಯ ನೊಂದಣಿ, ಮಾರ್ಗದರ್ಶನ ಹಾಗೂ ನರ್ಸ್ ಕಾನ್‌ಕ್ಲೇವ್ | | | | | | | | **50.00** |
| 17 | ಸ್ಪಡಿ ಅಬ್ರಾಡ್ ಕಾರ್ಯಕ್ರಮ | | | | | | | | **60.00** |
| 18 | PDOT Centre ಸ್ಥಾಪನೆ (ಮಂಗಳೂರು, ಮೈಸೂರು, ಕಲಬುರ್ಗಿ) | | | | | | | | **40.00** |
| | **ಆ. ಒಟ್ಟು (ಕಾರ್ಯಕ್ರಮಗಳು)** | | | | | | | | **2670.34** |
| | **ಒಟ್ಟು (ಅ+ಆ)** | | | | | | | | **6020.78** |

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.